**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 1595/2020**

ಸರ್ಕಾರದ ಪರ
ಕೋಟ ಠಾಣಾ ಪೊಲೀಸರು --- ಫಿರ್ಯಾದಿದಾರರು

-ಮತ್ತು-

1. ಕುಷ್ಟ ಕುಲಾಲ್ ಹಾಗೂ ಇತರರು --- ಆರೋಪಿತ

**ಃದೋಷಾರೋಪಣೆಃ**

ಶ್ರೀಮತಿ ರೋಹಿಣಿ. ಡಿ. ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

1. ಕುಷ್ಟ ಕುಲಾಲ್, 61 ವರ್ಷ,
ತಂದೆಃ ದಿ. ಮರ್ಲು ಕುಲಾಲ್,
ವಾಸಃ ಮಾಸ್ತಿಕಟ್ಟೆ 5 ಸೆಂಟ್ಸ್,
ಮೊಳಹಳ್ಳಿ ಗ್ರಾಮ, ಕುಂದಾಪುರ ತಾಲೂಕು.

2. ಗುಂಡು ಶೆಟ್ಟಿ, 55 ವರ್ಷ,
ತಂದೆಃ ದಿ. ಗಣಪಯ್ಯ ಶೆಟ್ಟಿ,
ವಾಸಃ ಒಳಲು ಮನೆ, ಪಡುಮುಂದು,
ಸಾಯಬ್ರಕಟ್ಟೆ, ಶಿರಿಯಾರ ಗ್ರಾಮ,
ಬ್ರಹ್ಮಾವರ ತಾಲೂಕು.

3. ಅನ್ವರ್, 35 ವರ್ಷ,
ತಂದೆಃ ದಿ. ಶೇಖಬ್ಬ,
ವಾಸಃ ಮನೆ ನಂಬ್ರ 2-33, ಶಾಹಿದ್ ಮಂಜಿಲ್,
ಪಲ್ಲಾ ಹೌಸ್, ವಿದ್ಯಾನಗರ ಕುಲೈ,
ಮಂಗಳೂರು ಸಿಟಿ

--- ಆರೋಪಿತರು

ಕೋಟ ಪೊಲೀಸ್ ಠಾಣಾ ಸರಹದ್ದಿನಲ್ಲಿ, ಕುಂದಾಪುರ ತಾಲೂಕು ಹಾರ್ದಳ್ಳಿ ಮಂಡಳ್ಳಿ ಗ್ರಾಮದ ಬಿದ್ಕಲ್ ಕಟ್ಟೆಯ 5 ಸೆಂಟ್ಸ್ ನಲ್ಲಿರುವ ಚಾ.ಸಾ. 1/ನಾಗರತ್ನ ಆಚಾರಿ ರವರು ಅವರ ಬಾಬ್ತು ಜರ್ಸಿ ದನವನ್ನು 07-08-2019 ರಂದು ಬೆಳಿಗ್ಗೆ 9.30 ಗಂಟೆಗೆ ಮೇಯಲು ಹಗ್ಗ ಹಾಕಿ ಕಟ್ಟಿದ್ದನ್ನು 1 ರಿಂದ 3 ನೇ ಅಪಾದಿತರಾದ ನೀವುಗಳು ಕಳವು ಮಾಡಿಕೊಂಡು ಹೋಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಯಾರಿಗೂ ಅನುಮಾನ ಬಾರದ ಹಾಗೆ ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ದನದ ಚರ್ಮ

ಹಾಗೂ ಸ್ವಲ್ಪ ಮಾಂಸ ಹಾಗೂ ಚೂರಿಯನ್ನು ಚೀಲದಲ್ಲಿ ಹಾಕಿ ಕತ್ತಲಿನಲ್ಲಿ ಬರುವಾಗ ಹಾಡಿಯ ಡ್ಯಾಮ್ ಬಳಿ ನೀರಿಗೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 201 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಚಾ.ಸಾ. 1/ನಾಗರತ್ನ ಆಚಾರಿ ರವರ ಜರ್ಸಿ ದನವನ್ನು ಕಳವು ಮಾಡಿಕೊಂಡು ಹೋಗಿ ಅದೇ ಹಾಡಿಯಲ್ಲಿ ಸ್ವಲ್ಪ ದೂರದಲ್ಲಿ ದನವನ್ನು ಕಟ್ಟಿ ಅದೇ ದಿನ ರಾತ್ರಿ ಯಾರಿಗೂ ತಿಳಿಯದ ಹಾಗೆ ದನದ ಕುತ್ತಿಗೆಯನ್ನು ಚೂರಿಯಿಂದ ಕೊಯ್ದು ಸಾಯಿಸಿ ಮಾಂಸ ಮಾಡಿದ್ದು, ಆ ಮೂಲಕ ನೀವುಗಳು ಕಲಂ 9, 11 ಕರ್ನಾಟಕ ಗೋ ಹತ್ಯೆ ತಡೆ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕಃ 22.03.2024

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 1595/2020**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕೋಟ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** ಃ1. ಕುಪ್ಪ ಕುಲಾಲ್, ತಂದೆಃ ದಿ. ಮರ್ಲು ಕುಲಾಲ್,

1. **ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
   ಉ.
2. **ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
   ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.,** ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 1595/2020**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕೋಟ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** ಃ2. ಗುಂಡು ಶೆಟ್ಟಿ, ತಂದೆಃ ದಿ. ಗಣಪಯ್ಯ ಶೆಟ್ಟಿ,

**1.ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
ಉ.

2. **ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
   ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.,** ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 1595/2020**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕೋಟ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** :3. ಅನ್ವರ್, ತಂದೆ: ದಿ. ಶೇಖಬ್ಬ,

1. **ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
   ಉ.
2. **ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
   ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.,** ಕುಂದಾಪುರ.